# ಡಾ: ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ

9ನೇ ಮಹಡಿ, ವಿಶ್ವೇಶ್ವರಯ್ಯ ಚಿಕ್ಕ ಗೋಪುರ, ಡಾ: ಅಂಬೇಡ್ಕರ್ ವೀದಿ, ಬೆಂಗಳೂರು–01.

**ದಿನಾಂಕ:06.12.2014ರಂದು ಮಧ್ಯಾಹ್ನ 4.30ಗಂಟೆಗೆ ನಿಗಮದ ಕೇಂದ್ರ ಕಛೇರಿಯಲ್ಲಿರುವ ಮಾನ್ಯ ಅಧ್ಯಕ್ಷರ ಕೊಠಡಿಯಲ್ಲಿ ನಡೆದ ನಿಗಮದ 203ನೇ ನಿರ್ದೇಶಕರ ಮಂಡಳಿ ಸಭೆಯ ನಡವಳಿಗಳು:**

**ಹಾಜರಾತಿ**

| ಹೆಸರು ಮತ್ತು ಪದನಾಮ | |
|---|---|
| ಕುಮಾರಿ ಮಲ್ಲಾಜಮ್ಮ,<br>ಮಾನ್ಯ ಅಧ್ಯಕ್ಷರು, ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ | ಅಧ್ಯಕ್ಷರು |
| ಶ್ರೀ ಎನ್. ಮಂಜುನಾಥ ಪ್ರಸಾದ್, ಭಾ.ಆ.ಸೇ.,<br>ಸರ್ಕಾರದ ಕಾರ್ಯದರ್ಶಿಗಳು,<br>ಸಮಾಜ ಕಲ್ಯಾಣ ಇಲಾಖೆ,<br>ಕರ್ನಾಟಕ ಸರ್ಕಾರ | ಸದಸ್ಯರು |
| ಶ್ರೀ.ಕೆ.ಸಿ.ಶ್ರೀರಾಮಯ್ಯ, ಕ.ಆ.ಸೇ., (ಎಸ್‌ಟಿಎಸ್)<br>ವ್ಯವಸ್ಥಾಪಕ ನಿರ್ದೇಶಕರು<br>ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ | ಸದಸ್ಯ ಕಾರ್ಯದರ್ಶಿ |
| ಶ್ರೀಮತಿ ಎಲ್. ರಾಜೇಶ್ವರಿ<br>ಉಪ ಕಾರ್ಯದರ್ಶಿಗಳು,<br>ಸಾರ್ವಜನಿಕ ಉದ್ದಿಮೆಗಳ ಇಲಾಖೆ | ಸದಸ್ಯರು |
| ಶ್ರೀ ರಾಮಚಂದ್ರಯ್ಯ,<br>ಸರ್ಕಾರದ ಉಪ ಕಾರ್ಯದರ್ಶಿಗಳು,<br>ಆರ್ಥಿಕ ಇಲಾಖೆ, | ಸದಸ್ಯರು |

**ಗೈರು ಹಾಜರಿ:**

| | |
|---|---|
| ಶ್ರೀ. ಎಸ್.ಎನ್.ಜಯರಾಂ, ಭಾ.ಆ.ಸೇ.,<br>ಆಯುಕ್ತರು,<br>ಸಮಾಜ ಕಲ್ಯಾಣ ಇಲಾಖೆ, | ಸದಸ್ಯರು |
| ಅಧ್ಯಕ್ಷರು ಹಾಗೂ ವ್ಯವಸ್ಥಾಪಕ ನಿರ್ದೇಶಕರು<br>ರಾಷ್ಟ್ರೀಯ ಪರಿಶಿಷ್ಟ ಜಾತಿ ಹಣಕಾಸು ಮತ್ತು ಅಭಿವೃದ್ಧಿ ನಿಗಮ, ಭಾರತ ಸರ್ಕಾರ, ನವದೆಹಲಿ, | ಸದಸ್ಯರು |
| ನಿರ್ದೇಶಕರು,<br>ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಮಂತ್ರಾಲಯ,<br>ಭಾರತ ಸರ್ಕಾರ, ನವದೆಹಲಿ | ಸದಸ್ಯರು |
| ಶ್ರೀ ಹೀರಾನಾಯಕ್, ಕೆ.ಎ.ಎಸ್., (ಎಸ್‌ಟಿಎಸ್)<br>ವ್ಯವಸ್ಥಾಪಕ ನಿರ್ದೇಶಕರು,<br>ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮ | ಸದಸ್ಯರು |

ನಿಗಮದ ವ್ಯವಸ್ಥಾಪಕ ನಿರ್ದೇಶಕರು, ನಿಗಮಕ್ಕೆ ಅಧ್ಯಕ್ಷರಾಗಿ ನೂತನವಾಗಿ ನೇಮಕಗೊಂಡು ಅಧಿಕಾರ ವಹಿಸಿಕೊಂಡಿರುವ ಕುಮಾರಿ ಮಲ್ಲಾಜಮ್ಮರವರನ್ನು ಸಭೆಗೆ ಹೃತ್ಪೂರ್ವಕವಾಗಿ ಸ್ವಾಗತಿಸಿ ಸಭೆಯಲ್ಲಿ ಹಾಜರಿದ್ದ ನಿರ್ದೇಶಕ ಮಂಡಳಿಯ ಸದಸ್ಯರಿಗೆ ಪರಿಚಯ ಮಾಡಿಸುತ್ತಾ, ಸಭೆಯಲ್ಲಿ ಹಾಜರಿದ್ದ ಸರ್ಕಾರದ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ಮತ್ತು ಹಾಜರಿದ್ದ ಮಂಡಳಿಯ ಇತರೆ ಸದಸ್ಯರನ್ನು ಸ್ವಾಗತಿಸಿದರು. ಸಭೆಗೆ ಕೋರಂ ಇರುವುದನ್ನು ಖಾತರಿಪಡಿಸಿ ಸಭೆ ನಡೆಸಬಹುದೆಂದು ಮಾನ್ಯ ಅಧ್ಯಕ್ಷರ ಗಮನಕ್ಕೆ ತರಲಾಯಿತು. 203ನೇ ಆಡಳಿತ ಮಂಡಳಿಯ ಸಭೆಯ ಅಧ್ಯಕ್ಷತೆಯನ್ನು ವಹಿಸಿ ಸಭೆಯನ್ನು ನಡೆಸಿಕೊಡಲು ವ್ಯವಸ್ಥಾಪಕ ನಿರ್ದೇಶಕರು ನಿಗಮದ ಮಾನ್ಯ ಅಧ್ಯಕ್ಷರನ್ನು ಕೋರಿದರು. 203ನೇ ಆಡಳಿತ ಮಂಡಳಿ ಸಭೆಯ ವಿಷಯವಾರು ನಡವಳಿ ಈ ಕೆಳಗಿನಂತಿದೆ.

**ವಿಷಯ ಸಂಖ್ಯೆ: 1 : 202ನೇ ನಿರ್ದೇಶಕರ ಮಂಡಳಿ ಸಭೆಯ ನಡವಳಿ ಅಂಗೀಕರಿಸುವ ಕುರಿತು**

ದಿನಾಂಕ:29.10.2014ರಂದು ನಡೆದ 202ನೇ ನಿರ್ದೇಶಕರ ಮಂಡಳಿಯ ಸಭೆಯಲ್ಲಿ ತೆಗೆದುಕೊಂಡ ವಿಷಯವಾರು ತೀರ್ಮಾನಗಳ ನಡವಳಿಯನ್ನು ಸರ್ವ ಸದಸ್ಯರಿಗೂ ಕಳುಹಿಸಲಾಗಿತ್ತು. ಯಾವುದೇ ಸದಸ್ಯರುಗಳಿಂದ ಸದರಿ ನಡವಳಿಯ ಬಗ್ಗೆ ವ್ಯತಿರಿಕ್ತ ಅಭಿಪ್ರಾಯಗಳು ಬಂದಿರುವುದಿಲ್ಲವೆಂಬುದನ್ನು ಸಭೆಯ ಗಮನಕ್ಕೆ ತರಲಾಯಿತು ಮತ್ತು ನಡವಳಿಯನ್ನು ಯಥಾವತ್ತಾಗಿ ಅಂಗೀಕರಿಸುವ ಬಗ್ಗೆ ಸಭೆಯನ್ನು ಕೋರಲಾಯಿತು.

**ನಿರ್ಣಯ: 1 : ಸದಸ್ಯರಿಂದ ವ್ಯತಿರಿಕ್ತ ಅಭಿಪ್ರಾಯಗಳು ಬಾರದ ಕಾರಣ, ನಡವಳಿಯನ್ನು ಯಥಾವತ್ತಾಗಿ ಅಂಗೀಕರಿಸಲು ಸಭೆಯು ನಿರ್ಣಯಿಸಿತು.**

**ವಿಷಯ ಸಂಖ್ಯೆ: 2 : 202ನೇ ನಿರ್ದೇಶಕರ ಮಂಡಳಿ ಸಭೆಯ ನಡವಳಿ ಮೇಲೆ ಕೈಗೊಂಡ ಅನುಸರಣಾ ವರದಿ**

202ನೇ ಆಡಳಿತ ಮಂಡಳಿ ಸಭೆಯಲ್ಲಿ ತೆಗೆದುಕೊಂಡ ನಿರ್ಣಯದಂತೆ ಕ್ರಮ ಕೈಗೊಳ್ಳಲಾಗಿದೆ ಎಂದು ಸಭೆಗೆ ವಿವರಿಸಲಾಯಿತು. ಸಭೆಯು ಅನುಸರಣಾ ವರದಿಯನ್ನು ಪರಾಂಭರಿಸಿತು ಮತ್ತು ಯಥಾವತ್ತಾಗಿ ಒಪ್ಪಲು ಚರ್ಚಿಸಿತು.

**ನಿರ್ಣಯ: 2 : ನಡವಳಿಗಳ ಮೇಲೆ ಕೈಗೊಂಡಿರುವ ಕ್ರಮಗಳನ್ನು ಪರಾಂಭರಿಸಿದ ಸಭೆಯು ಕ್ರಮಗಳನ್ನು ಯಥಾವತ್ತಾಗಿ ಒಪ್ಪಲು ನಿರ್ಣಯಿಸಿತು.**

**ವಿಷಯ ಸಂಖ್ಯೆ: 3 : ಮೈಕ್ರೋ ಕ್ರೆಡಿಟ್ ಕಿರುಸಾಲ ಯೋಜನೆ ಅನುಷ್ಠಾನಕ್ಕಾಗಿ 2014-15ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಉಪಯೋಜನೆಯ ವಿಶೇಷ ಕೇಂದ್ರೀಯ ನೆರವಿನಡಿ(SCA to SCSP) ಅನುದಾನವನ್ನು ಪರಿಶಿಷ್ಟ ಜಾತಿ ಮಹಿಳೆಯರಿಗೆ ಆರ್ಥಿಕ ಚಟುವಟಿಕೆಗಳ ಕಾರ್ಯ ಕ್ರಮಗಳಿಗೆ ಉಪಯೋಗಿಸಿಕೊಂಡು ಯೋಜನೆ ಅನುಷ್ಠಾನಗೊಳಿಸುವ ಬಗ್ಗೆ.**

ವ್ಯವಸ್ಥಾಪಕ ನಿರ್ದೇಶಕರು ಮಾತನಾಡಿ ಸರ್ಕಾರದ ಆದೇಶ ಸಂಖ್ಯೆ: ಸಕಇ 72 ಎಸ್‌ಎಲ್‌ಪಿ 2013, ಬೆಂಗಳೂರು, ದಿನಾಂಕ:07.08.2014ರ ಪತ್ರದಲ್ಲಿ ಪರಿಶಿಷ್ಟ ಜಾತಿ ಉಪ ಯೋಜನೆಯ ವಿಶೇಷ ಕೇಂದ್ರೀಯ ನೆರವಿನಡಿ ಪರಿಶಿಷ್ಟ ಜಾತಿಯ ಮಹಿಳೆಯರಿಗೆ ಸ್ವಯಂ ಉದ್ಯೋಗ ಯೋಜನೆ ಕೈಗೊಳ್ಳಲು ರೂ.18.92ಕೋಟಿ ಸಹಾಯಧನ ಬಿಡುಗಡೆಯಾಗಿರುತ್ತದೆ. ಸದರಿ ಯೋಜನೆಯಂತೆ ಘಟಕ ವೆಚ್ಚ ರೂ.15,000/-ಗಳಾಗಿದ್ದು,(ರೂ.10,000/- ಸಹಾಯಧನ ಮತ್ತು ರೂ.5,000/- ಬೀಜಧನ) 15309 ಫಲಾಪೇಕ್ಷಿಗಳಿಗೆ ಸೌಲಭ್ಯ ಕಲ್ಪಿಸಲು ಮತ್ತು ಹೆಚ್ಚುವರಿ ಗುರಿಯನ್ನು ಎಲ್ಲಾ 224 ವಿಧಾನಸಭಾ ಕ್ಷೇತ್ರಗಳಿಗೆ ಪರಿಶಿಷ್ಟ ಜಾತಿ ಜನ ಸಂಖ್ಯೆ ಆಧಾರದಲ್ಲಿ ಹಂಚಿಕೆ ಮಾಡಲು ಸಭೆಯ ಅನುಮೋದನೆ ಕೋರಿದರು.

**ನಿರ್ಣಯ : 3 : ನಿರ್ದೇಶಕರ ಮಂಡಳಿ ಸಭೆಯು ವಿಷಯವನ್ನು ಪರಿಶೀಲಿಸಿ ಬಿಡುಗಡೆಯಾಗಿರುವ ಅನುದಾನ ರೂ.18.92ಕೋಟಿಗಳಿಂದ 15309 ಫಲಾನುಭವಿಗಳಿಗೆ ಸೌಲಭ್ಯ ಕಲ್ಪಿಸಲು ಇದರಲ್ಲಿ ಶೇ.20ರಷ್ಟನ್ನು ಸಾಂಸ್ಥಿಕ ಕೋಟಾದಡಿ ಗುರಿಯನ್ನು ಮೀಸಲಿಟ್ಟು ಉಳಿದ ಶೇ.80ರಷ್ಟು ವಿಧಾನಸಭಾ ಕ್ಷೇತ್ರವಾರು ಗುರಿಯನ್ನು ನಿಗದಿಪಡಿಸಲು ಸಭೆಯು ನಿರ್ಣಯಿಸಿತು.**

**ವಿಷಯ ಸಂಖ್ಯೆ: 4 : ಮಹಿಳಾ ಸಮೃದ್ಧಿ ಯೋಜನೆಯಡಿ ನಿಗಮದಲ್ಲಿ ಖರ್ಚಾಗದೇ ಲಭ್ಯವಿರುವ ಅನುದಾನದಿಂದ ಸಾಲ ಮಂಜೂರು ಮಾಡುವ ಕುರಿತು.**

ವ್ಯವಸ್ಥಾಪಕ ನಿರ್ದೇಶಕರು ಮಾತನಾಡಿ ಎನ್.ಎಸ್.ಸಿ.ಎಫ್.ಡಿ.ಸಿ. ಸಂಸ್ಥೆಯಿಂದ ಬಿಡುಗಡೆಯಾಗಿರುವ ರೂ.542.10ಲಕ್ಷಗಳು ನಿಗಮದಲ್ಲಿ ಲಭ್ಯವಿದ್ದು, ಸದರಿ ಯೋಜನೆಯಡಿ ಸಾಲ ರೂ.15,000/– ಹಾಗೂ ಸಹಾಯಧನ ರೂ.10,000/–ದಂತೆ, ಒಟ್ಟು ರೂ.25,000/–ಗಳ ಘಟಕ ವೆಚ್ಚದಲ್ಲಿ ಪರಿಶಿಷ್ಟ ಜಾತಿಯ ಮಹಿಳಾ ಫಲಾಪೇಕ್ಷಿಗಳನ್ನು ಆರ್ಥಿಕವಾಗಿ ಸಬಲರನ್ನಾಗಿ ಮಾಡಲು ವಿವಿಧ ಆರ್ಥಿಕ ಚಟುವಟಿಕೆ ಕೈಗೊಳ್ಳಲು 3614 ಫಲಾನುಭವಿಗಳಿಗೆ ಸಾಲ ಸೌಲಭ್ಯ ಕಲ್ಪಿಸಲು ಅನುಮೋದನೆ ನೀಡಲು ಸಭೆಯನ್ನು ಕೋರಿದರು.

**ನಿರ್ಣಯ: 4 : ಈ ವಿಷಯದ ಬಗ್ಗೆ ಸುದೀರ್ಘವಾಗಿ ಚರ್ಚಿಸಿದ ಸಭೆಯು ಎನ್.ಎಸ್.ಸಿ.ಎಫ್.ಡಿ.ಸಿ.ಯ ಲಭ್ಯವಿರುವ ಅವಧಿಸಾಲ ರೂ.542.10ಲಕ್ಷಗಳಿಂದ 3614 ಫಲಾನುಭವಿಗಳಿಗೆ ಸೌಲಭ್ಯ ಕಲ್ಪಿಸಿ, ಇದರಲ್ಲಿ ಶೇ.20ರಷ್ಟನ್ನು ಸಾಂಸ್ಥಿಕ ಕೋಟಾದಡಿ ಗುರಿಯನ್ನು ಮೀಸಲಿಟ್ಟು ಉಳಿದ ಶೇ.80ರಷ್ಟು ವಿಧಾನಸಭಾ ಕ್ಷೇತ್ರವಾರು ಗುರಿಯನ್ನು ನಿಗದಿಪಡಿಸಲು ಸಭೆಯು ನಿರ್ಣಯಿಸಿತು.**

**ವಿಷಯ ಸಂಖ್ಯೆ: 5 : ಮೈಕ್ರೋಕ್ರೆಡಿಟ್ ಯೋಜನೆ–01ರಲ್ಲಿ ನಿಗಮದಲ್ಲಿ ಖರ್ಚಾಗದೇ ಲಭ್ಯವಿರುವ ಅನುದಾನದಿಂದ ಸಾಲ ಮಂಜೂರು ಮಾಡುವ ಕುರಿತು.**

ವ್ಯವಸ್ಥಾಪಕ ನಿರ್ದೇಶಕರು ಮಾತನಾಡಿ ಎನ್.ಎಸ್.ಸಿ.ಎಫ್.ಡಿ.ಸಿ. ಸಂಸ್ಥೆಯಿಂದ ಬಿಡುಗಡೆಯಾಗಿದ್ದ ರೂ.454.33ಲಕ್ಷಗಳು ನಿಗಮದಲ್ಲಿ ಲಭ್ಯವಿದ್ದು, ಮೈಕ್ರೋ ಕ್ರೆಡಿಟ್ ಯೋಜನೆ–1ರಡಿ ಸಾಲ ರೂ.15,000/– ಹಾಗೂ ಸಹಾಯಧನ ರೂ.10,000/–ದಂತೆ, ಒಟ್ಟು ರೂ.25,000/–ಗಳ ಘಟಕ ವೆಚ್ಚದಲ್ಲಿ ಪರಿಶಿಷ್ಟ ಜಾತಿಯ ಫಲಾಪೇಕ್ಷಿಗಳನ್ನು ಆರ್ಥಿಕವಾಗಿ ಸಬಲರನ್ನಾಗಿ ಮಾಡಲು ವಿವಿಧ ಆರ್ಥಿಕ ಚಟುವಟಿಕೆ ಕೈಗೊಳ್ಳಲು ಸ್ಥಳೀಯ ಸಂಸ್ಥೆಗಳಾದ ನಗರಸಭೆ, ಪುರಸಭೆ, ತಾಲ್ಲೂಕು ಪಂಚಾಯ್ತಿಗಳಿಂದ ಶೇ.22.75ರ ಅನುದಾನದಿಂದ ಸಹಾಯಧನ ಪಡೆದು, 3028 ಫಲಾಪೇಕ್ಷಿಗಳಿಗೆ ಸೌಲಭ್ಯ ಕಲ್ಪಿಸಲು ಅನುಮೋದನೆ ನೀಡಲು ಸಭೆಯನ್ನು ಕೋರಿದರು.

**ನಿರ್ಣಯ: 5 : ಈ ವಿಷಯವನ್ನು ಸುದೀರ್ಘವಾಗಿ ಚರ್ಚಿಸಿದ ಸಭೆಯು ಎನ್.ಎಸ್.ಸಿ.ಎಫ್.ಡಿ.ಸಿ.ಯಲ್ಲಿ ಲಭ್ಯವಿರುವ ಅವಧಿಸಾಲ ರೂ.454.33ಲಕ್ಷಗಳಲ್ಲಿ 3028 ಫಲಾನುಭವಿಗಳಿಗೆ ಸೌಲಭ್ಯ ಕಲ್ಪಿಸಿ, ಇದರಲ್ಲಿ ಶೇ.20ರಷ್ಟು ಸಾಂಸ್ಥಿಕ ಕೋಟಾದಡಿ ಗುರಿಯನ್ನು ಮೀಸಲಿಟ್ಟು, ಉಳಿದ ಶೇ.80ರಷ್ಟು ವಿಧಾನಸಭಾ ಕ್ಷೇತ್ರವಾರು ಗುರಿಯನ್ನು ನಿಗದಿಪಡಿಸಲು ಸಭೆಯು ನಿರ್ಣಯಿಸಿತು.**

**ವಿಷಯ ಸಂಖ್ಯೆ: 6 : ನಿಗಮದ ಅಧ್ಯಕ್ಷರಿಗೆ ಹೊಸ ವಾಹನವನ್ನು ಖರೀದಿಸುವ ಕುರಿತು**

ವ್ಯವಸ್ಥಾಪಕ ನಿರ್ದೇಶಕರವರು ಹೊಸದಾಗಿ ಅಧಿಕಾರ ವಹಿಸಿಕೊಂಡ ಮಾನ್ಯ ಅಧ್ಯಕ್ಷರಿಗೆ ಒಂದು ಹೊಸ ಇನೋವಾ ವಾಹನವನ್ನು ಖರೀದಿಸಲು ಸರ್ಕಾರದ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ ರವರಿಂದ ಅನುಮೋದನೆ ಪಡೆದು ಈಗಾಗಲೇ ಮೆ: ಟಯೋಟಾ ಕಿರ್ಲೋಸ್ಕರ್ ಮೋಟಾರ್ ಪ್ರೈವೇಟ್ ಲಿಮಿಟೆಡ್ ರವರಿಗೆ ರೂ.14,45,731/–ನ್ನು ಪಾವತಿಸಿರುವುದಕ್ಕೆ ನಿರ್ದೇಶಕ ಮಂಡಳಿಯ ಘಟನೋತ್ತರ ಅನುಮೋದನೆ ಕೋರಿದರು.

**ನಿರ್ಣಯ: 6 : ನಿರ್ದೇಶಕ ಮಂಡಳಿ ಸಭೆಯು ಮಾನ್ಯ ಅಧ್ಯಕ್ಷರಿಗೆ ವಾಹನ ಖರೀದಿಸಲು ತೆಗೆದುಕೊಂಡಿರುವ ಕ್ರಮಕ್ಕೆ ಘಟನೋತ್ತರ ಅನುಮೋದನೆ ನೀಡಿತು.**

**ವಿಷಯ ಸಂಖ್ಯೆ: 7 : ಚಿತ್ರದುರ್ಗ ಜಿಲ್ಲೆ ಹಿರಿಯೂರು ವಿಧಾನ ಸಭಾ ಕ್ಷೇತ್ರಕ್ಕೆ ಗಂಗಾ ಕಲ್ಯಾಣ ಯೋಜನೆಯಡಿ ಹೆಚ್ಚುವರಿ ಗುರಿ ನಿಗದಿಪಡಿಸಲು ಹಿರಿಯೂರು ಕ್ಷೇತ್ರದ ಮಾನ್ಯ ಶಾಸಕರು ಸಲ್ಲಿಸಿರುವ ಪ್ರಸ್ತಾವನೆ ಬಗ್ಗೆ**

ವ್ಯವಸ್ಥಾಪಕ ನಿರ್ದೇಶಕರು ಹಿರಿಯೂರು ಕ್ಷೇತ್ರದ ಮಾನ್ಯ ಶಾಸಕರು ಹಾಗೂ ಮಾಜಿ ಸಮಾಜ ಕಲ್ಯಾಣ ಸಚಿವರು ತಮ್ಮ ಅಧಿಕಾರ ಅವಧಿಯಲ್ಲಿ 2011-12ನೇ ಸಾಲಿನಲ್ಲಿ ಪರಿಶಿಷ್ಟ ಜಾತಿಯ 100 ಫಲಾಪೇಕ್ಷಿಗಳಿಗೆ ಹೆಚ್ಚುವರಿ ಕೊಳವೆಬಾವಿಗಳನ್ನು ಕೊರೆಸಲು ಸರ್ಕಾರಿ ಆದೇಶ (ಸಂಖ್ಯೆ:ಸಕಇ 78 ಪಕವಿ 2012, 13.06.2012) ಹೊರಡಿಸಲಾಗಿರುತ್ತದೆ. ಸದರಿ ಆದೇಶದನ್ವಯ ಆಯವ್ಯಯದಲ್ಲಿ ಒದಗಿಸಿದ ಅನುದಾನದಲ್ಲಿಯೇ ಇದಕ್ಕೆ ತಗುಲುವ ಖರ್ಚನ್ನು ಭರಿಸಲು ತಿಳಿಸಿದ್ದರಿಂದ ಅನುದಾನ ಲಭ್ಯತೆ ಇಲ್ಲದ ಹಿನ್ನೆಲೆಯಲ್ಲಿ ಹೆಚ್ಚುವರಿ ಕೊಳವೆಬಾವಿಗಳನ್ನು ಕೊರೆಸಿರುವುದಿಲ್ಲ. 2011-12ನೇ ಸಾಲಿನಲ್ಲಿ ಈ 100 ಕೊಳವೆಬಾವಿಗಳನ್ನು ಕೊರೆಯಲು ಹೆಚ್ಚುವರಿಯಾಗಿ ರೂ.100.00ಲಕ್ಷಗಳ ಸಹಾಯಧನ ಮತ್ತು ರೂ.50.00ಲಕ್ಷಗಳ ಅವಧಿಸಾಲದ ಅವಶ್ಯಕತೆ ಬೀಳಲಿದೆ ಎಂದು ವಿವರಿಸಿ ಸದರಿ ಕೊಳವೆಬಾವಿಗಳನ್ನು ಕೊರೆಸುವ ಸಂಬಂಧ ನಿರ್ದೇಶಕರ ಮಂಡಳಿ ಸಭೆಯ ಅವಗಾಹನೆಗೆ ಮಂಡಿಸಿದರು.

**ನಿರ್ಣಯ: 7 : ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಿದ ನಿರ್ದೇಶಕರ ಮಂಡಳಿ ಸಭೆಯು ಸದರಿ 100 ಕೊಳವೆಬಾವಿಗಳನ್ನು ಕೊರೆಯಲು ಮಾನ್ಯ ಶಾಸಕರು ಸರ್ಕಾರದಿಂದ ರೂ.100.00ಲಕ್ಷಗಳ ಅನುದಾನವನ್ನು ನಿಗಮಕ್ಕೆ ಬಿಡುಗಡೆ ಮಾಡಿಸಿದಲ್ಲಿ ಕೊಳವೆಬಾವಿಗಳನ್ನು ಕೊರೆಯಲು ಕ್ರಮವಹಿಸುವಂತೆ ವ್ಯವಸ್ಥಾಪಕ ನಿರ್ದೇಶಕರಿಗೆ ಸೂಚಿಸಿತು.**

**ವಿಷಯ ಸಂಖ್ಯೆ: 8 : ನಿಗಮದ ರಾಯಚೂರು ಜಿಲ್ಲಾ ಕಛೇರಿಯಲ್ಲಿ 2012-13ನೇ ಸಾಲಿನಲ್ಲಿ ಭೂ ಒಡೆತನ ಯೋಜನೆಯಡಿ ಭೂ ಮಂಜೂರಾದ ಪ್ರಕರಣಗಳಲ್ಲಿ ಅವ್ಯವಹಾರವಾಗಿರುವ ಬಗ್ಗೆ ಜಿಲ್ಲಾಧಿಕಾರಿಗಳು, ರಾಯಚೂರು ಇವರ ವರದಿಯ ಮೇಲೆ ಕ್ರಮ ಕೈಗೊಳ್ಳುವ ಕುರಿತು.**

ವ್ಯವಸ್ಥಾಪಕ ನಿರ್ದೇಶಕರು ನಿಗಮದ ರಾಯಚೂರು ಜಿಲ್ಲಾ ಕಛೇರಿಯಲ್ಲಿ 2012-13ನೇ ಸಾಲಿನಲ್ಲಿ ಭೂ ಒಡೆತನ ಯೋಜನೆಯಡಿ ಭೂ ಮಂಜೂರಾದ ಪ್ರಕರಣಗಳಲ್ಲಿ ಅವ್ಯವಹಾರವಾಗಿರುವ ಬಗ್ಗೆ ಸಹಾಯಕ ಆಯುಕ್ತರು, ರಾಯಚೂರು ರವರ ವರದಿ ಆಧರಿಸಿ ದಿನಾಂಕ:10.11.2014ರಲ್ಲಿ ಜಿಲ್ಲಾಧಿಕಾರಿಗಳು, ರಾಯಚೂರುರವರು ಈ ಕಛೇರಿಗೆ ಪತ್ರ ಬರೆದು ಭೂ ಒಡೆತನ ಯೋಜನೆಯಡಿ 2012-13ನೇ ಸಾಲಿನಲ್ಲಿ ಮಂಜೂರಾಗಿರುವ ಪ್ರಕರಣಗಳಲ್ಲಿ ಅವ್ಯವಹಾರವಾಗಿರುವುದು ಮೇಲ್ನೋಟಕ್ಕೆ ಸ್ಪಷ್ಟವಾಗಿದೆ ಎಂದೂ, ಇಂತಹ ಪ್ರಕರಣಗಳು ಇನ್ನೂ ಹೆಚ್ಚಿರುವ ಸಂಭವವಿರುವುದರಿಂದ ಹೆಚ್ಚಿನ ತನಿಖೆಯ ಅವಶ್ಯಕತೆ ಇದ್ದು, ಹೆಚ್ಚಿನ ತನಿಖೆಗಾಗಿ ಲೋಕಾಯುಕ್ತ ಅಥವಾ ಸಿ.ಓ.ಡಿ ರವರಿಂದ ತನಿಖೆ ನಡೆಸುವುದು ಸೂಕ್ತವಿರುತ್ತದೆ ಎಂಬ ಅಂಶವನ್ನು ಸಭೆಯ ಗಮನಕ್ಕೆ ತರಲಾಯಿತು.

ಸರ್ಕಾರದ ಕಾರ್ಯದರ್ಶಿಗಳು ಮಾತನಾಡಿ ಈಗಾಗಲೇ ಮಾನ್ಯ ಲೋಕಾಯುಕ್ತ ಮತ್ತು ಸಿ.ಓ.ಡಿ.ಗೆ ವಹಿಸಿರುವ ಪ್ರಕರಣಗಳಲ್ಲಿ ವರದಿ ನೀಡುವುದು ವಿಳಂಬವಾಗುತ್ತಿದ್ದು, ತಪ್ಪಿತಸ್ಥರ ಮೇಲೆ ಕ್ರಮ ಕೈಗೊಳ್ಳಲು ಸಾಧ್ಯವಾಗುತ್ತಿಲ್ಲ. ಮೇಲಿನ ಸಂಸ್ಥೆಗಳಿಗೆ ತನಿಖೆಗೆ ವಹಿಸಿರುವ ಪ್ರಕರಣಗಳು ಜಾಸ್ತಿ ಇರುವ ಹಿನ್ನೆಲೆಯಲ್ಲಿ ಅವರಿಂದ ಶೀಘ್ರವಾಗಿ ತನಿಖೆಯನ್ನು ನಿರೀಕ್ಷಿಸುವುದು ಸಾಧ್ಯವಿರುವುದಿಲ್ಲ. ಆದುದರಿಂದ ಇಲಾಖೆಯ ಹಿರಿಯ ಅಧಿಕಾರಿಗಳ ತಂಡ ರಚಿಸಿ ತನಿಖೆ ಮಾಡಿಸುವುದು ಸೂಕ್ತವೆಂದು ಸಭೆಯ ಗಮನಕ್ಕೆ ತಂದರು.

**ನಿರ್ಣಯ: 8 : ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಿದ ನಿರ್ದೇಶಕ ಮಂಡಳಿ ಸಭೆಯು ವಿಷಯದ ತೀವ್ರತೆಯನ್ನು ಮನಗಂಡು ಸಮಾಜ ಕಲ್ಯಾಣ ಇಲಾಖೆಯ ಸಚಿವಾಲಯ ಮತ್ತು ಆಯುಕ್ತರ ಕಛೇರಿಯ ಹಿರಿಯ ಅಧಿಕಾರಿಗಳ ತಂಡವನ್ನು ರಚಿಸಿ ತನಿಖೆ ಮಾಡಿಸಲು ಸರ್ಕಾರದ ಕಾರ್ಯದರ್ಶಿಗಳಿಗೆ ಪ್ರಸ್ತಾವನೆ ಸಲ್ಲಿಸಲು ವ್ಯವಸ್ಥಾಪಕ ನಿರ್ದೇಶಕರಿಗೆ ಸೂಚಿಸಿತು.**